ಉದಯಕಾಲ
UDAYAKALA
Monday, April 01, 2024

# ಸಹಾಯಕ ಕೃಷಿ ಅಧಿಕಾರಿ ಅಮಾನತ್ತು

**ಉದಯಕಾಲ್ ನ್ಯೂಸ್**

**ಬಾಗಲಕೋಟೆ:** ಲೋಕಸಭಾ ಚುನಾವಣಾ ಹಿನ್ನಲೆಯಲ್ಲಿ ಚುನಾವಣಾ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾದ ಹುನುಗುಂದ ಸಹಾಯಕ ಕೃಷಿ ಅಧಿಕಾರಿ ರಾಘವೇಂದ್ರ ಕೊಂಡಗುರಿ ಅವರನ್ನು ಜಿಲ್ಲಾಧಿಕಾರಿ ಆಗಿರುವ ಜಿಲ್ಲಾ ಚುನಾವಣಾಧಿಕಾರಿ ಜಾನಕಿ ಕೆ.ಎಂ ಅಮಾನತ್ತುಗೊಳಿಸಿ ಆದೇಶ ಹೊರಡಿಸಿದ್ದಾರೆ.

ಹುನಗುಂದ ಮತಕ್ಷೇತ್ರ, ವ್ಯಾಪ್ತಿಯ ಇಳಕಲ್ಲ ತಾಲೂಕಿನ ಗುಗ್ಗಲಮರಿ ಚೆಕ್‌ಪೋಸ್ಟನ ಮುಖ್ಯಸ್ಥರನ್ನಾಗಿ ರಾಘವೇಂದ್ರ ಕೊಂಡಗುರಿ ಅವರನ್ನು ನೇಮಿಸಲಾಗಿತ್ತು. ಮಾರ್ಚ 29 ರಂದು ರಾತ್ರಿ 10 ರಿಂದ ಮರುದಿನ ಬೆಳಗಿನ ಜಾವ 6 ಗಂಟೆವರೆಗೆ ಕರ್ತವ್ಯ ನಿರ್ವಹಿಸಬೇಕಿತ್ತು. ಕರ್ತವ್ಯಕ್ಕೆ ಹಾಜರಾಗದೇ ಅನಧಿಕೃತವಾಗಿ ಗೈರು ಹಾಜರಾಗಿದ್ದರು. ಇದರಿಂದ ಚುನಾವಣಾ ಕಾರ್ಯಗಳಿಗೆ ತೊಂದರೆಯುಂಟು ಮಾಡಿರುವ ಅವರನ್ನು ವಿಚಾರಣೆಗೆ ಬಾಕಿ ಇರಿಸಿ ಸೇವೆಯಿಂದ ಅಮಾನತ್ತುಗೊಳಿಸಿರುವುದಾಗಿ ಆದೇಶದಲ್ಲಿ ತಿಳಿಸಿದ್ದಾರೆ.

# ರಾಷ್ಟ್ರ ಮಟ್ಟದ ಕಬಡ್ಡಿಯಲ್ಲಿ ಕಾಡರಕೊಪ್ಪ ಶಾಲೆಯ ವಿದ್ಯಾರ್ಥಿನಿಯರು ಭಾಗಿ

**ಉದಯಕಾಲ್ ನ್ಯೂಸ್**

**ಬಾದಾಮಿ:** ಮಾ.31 ರಿಂದ ಎ.3 ರ ವರೆಗೆ ಬಿಹಾರ ರಾಜ್ಯದ ಪಾಟ್ನಾ ದಲ್ಲಿ ನಡೆಯುತ್ತಿರುವ 33ನೇ ರಾಷ್ಟೀಯ ಸಬ್ ಜೂನಿಯರ್ ಬಾಲಕಿಯರ ಕಬಡ್ಡಿ ಕ್ರೀಡಾಕೂಟಕ್ಕೆ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸುತ್ತಿರುವ ತಾಲೂಕಿನ ಕಾಡರಕೊಪ್ಪ ಗ್ರಾಮದ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿಯರಾದ ಕುಮಾರಿ. ಸೌಜನ್ಯ ಆಲೂರ ಹಾಗೂ ಕುಮಾರಿ ಸರಸ್ವತಿ ಉದುಪುಡಿ ಕಬಡ್ಡಿ ಪಂದ್ಯಾವಳಿಯಲ್ಲಿ ಭಾಗವಹಿಸಲಿದ್ದಾರೆ.

ಅಭಿನಂದನೆ: ರಾಷ್ಟ್ರಮಟ್ಟದ ಕಬಡ್ಡಿಯಲ್ಲಿ ರಾಜ್ಯವನ್ನು ಪ್ರತಿನಿಧಿಸುತ್ತಿರುವ ಇಬ್ಬರು ವಿದ್ಯಾರ್ಥಿನಿಯರನ್ನು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಬಿ.ಕೆ. ನಂದನೂರ, ಕ್ಷೇತ್ರ ಶಿಕ್ಷಣಾಧಿಕಾರಿ ಎನ್.ವೈ. ಕುಂದರಗಿ, ಕ್ಷೇತ್ರ ಸಮನ್ವಯಾಧಿಕಾರಿ ಎಂ.ಬಿ. ದೊಡ್ಡಪ್ಪನವರ, ತಾಲೂಕಾ ದೈಹಿಕ ಪರಿವೀಕ್ಷಕರು ಬಿ.ಎಚ್. ಹಳಗೇರಿ, ಶಿಕ್ಷಣ ಸಂಯೋಜಕರು, ಸಮೂಹ ಸಂಪನ್ಮೂಲ ವ್ಯಕ್ತಿಗಳು, ಕಾಡರಕೊಪ್ಪ ಶಾಲೆಯ ಮುಖ್ಯ ಗುರುಗಳು ಹಾಗೂ ಶಾಲೆಯ ಎಲ್ಲ ಶಿಕ್ಷಕ ಸಿಬ್ಬಂದಿ ವರ್ಗದವರು ಹಾಗೂ ಕಾಡರಕೊಪ್ಪ ಗ್ರಾಮಸ್ಥರು ಅಭಿನಂದನೆ ಸಲ್ಲಿಸಿದ್ದಾರೆ.

# ಆರ್.ಟಿ.ಇ. ಪ್ರವೇಶಕ್ಕೆ ಅರ್ಜಿ ಆಹ್ವಾನ; ಎ.22 ಕೊನೆಯ ದಿನ

**ಉದಯಕಾಲ್ ನ್ಯೂಸ್**

**ಬಾದಾಮಿ:** ಶಿಕ್ಷಣ ಹಕ್ಕು ಕಾಯ್ದೆಯನ್ವಯ(ಆರ್.ಟಿ.ಇ) ಶಿಕ್ಷಣ ಸಂಸ್ಥೆಗಳ ಪ್ರವೇಶಕ್ಕೆ ಶಾಲಾ ಶಿಕ್ಷಣ ಇಲಾಖೆ ಅರ್ಜಿ ಆಹ್ವಾನಿಸಿದೆ. ಆನ್ ಲೈನ್ ಲಿಂಕ್ ಬಿಡುಗಡೆ ಮಾಡಲಾಗಿದ್ದು, ಎ.22 ರ ವರೆಗೆ ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿಗಳ ಪರಿಶೀಲನೆ ಬಳಿಕ ಲಾಟರಿ ಪ್ರಕ್ರಿಯೆಯಲ್ಲಿ ಅರ್ಹರ ಅಂತಿಮ ಪಟ್ಟಿಯನ್ನು ಎ.26 ರಂದು ಬಿಡುಗಡೆ ಮಾಡಲಾಗುತ್ತದೆ. ಆನ್ ಲೈನ್ ತಂತ್ರಾಂಶದ ಮೂಲಕ ಮೊದಲ ಸುತ್ತಿನ ಸೀಟು ಹಂಚಿಕೆಯು ಎ.30 ರಂದು ನಡೆಯಲಿದ್ದು, ಆಯ್ಕೆಯಾದವರು ಶಾಲೆಗಳಿಗೆ ಪ್ರವೇಶ ಪಡೆಯಲು ಮೇ 13 ರ ವರೆಗೆ ಕಾಲಾವಕಾಶ ನೀಡಲಾಗುವುದು. ಈ ಪ್ರಕ್ರಿಯೆ ಬಳಿಕೆ ಎರಡನೇ ಸುತ್ತಿನ ಸೀಟು ಹಂಚಿಕೆ ಮೇ 22 ರಂದು ನಡೆಯಲಿದೆ. 2025-26 ನೇ ಸಾಲಿಗೆ 1 ನೇ ತರಗತಿ ಪ್ರವೇಶಕ್ಕೆ 6 ವರ್ಷ ಆಗಿರಬೇಕು ಎಂದು ಸರಕಾರ ಈ ಹಿಂದೆಯೇ ಆದೇಶ ಮಾಡಿದೆ. ಇದೇ ಕಾರಣಕ್ಕಾಗಿ ಈ ಬಾರಿ ಎಲ್‌ಕೆಜಿ ಪ್ರವೇಶ ಪಡೆಯುವ ಮಕ್ಕಳಿಗೆ ಕಡ್ಡಾಯವಾಗಿ 4 ವರ್ಷಗಳಾಗಿರಬೇಕು. ಆದರೆ ಒಂದನೇ ತರಗತಿಗೆ ದಾಖಲಾಗುವ ಮಗುವಿಗೆ 5 ವರ್ಷ 5 ತಿಂಗಳಿನಿಂದ 7 ವರ್ಷಗಳ ಒಳಗಿರಬೇಕು. ಅರ್ಹ ಮಕ್ಕಳು ಮಗುವಿನ ಆಧಾರ ಕಾರ್ಡ, ಲಿಂಕ್ ಇರುವ ಮೊಬೈಲ್ ನಂಬರ, ತಂದೆ ತಾಯಿಯ ಆದಾರ ಕಾರ್ಡ, ಜಾತಿ ಮತ್ತು ಆದಾಯ ಪ್ರಮಾಣಪತ್ರದೊಂದಿಗೆ ಎ.22 ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎನ್.ವೈ. ಕುಂದರಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಲಪ್ರಭಾ ನದಿಗೆ 1 ಟಿಎಂಸಿ ನೀರು ಬಿಡುಗಡೆ

**ಉದಯಕಾಲ್ ನ್ಯೂಸ್**

**ಬಾದಾಮಿ:** ನವಿಲುತೀರ್ಥ ಜಲಾಶಯದಿಂದ ಮಲಪ್ರಭಾ ನದಿಗೆ 1 ಟಿಎಂಸಿ ನೀರು ಬಿಡುಗಡೆ ಮಾಡಲಾಗುತ್ತಿದೆ ಎಂದು ಬೆಳಗಾವಿ ಪ್ರಾದೇಶಿಕ ಆಯುಕ್ತರು ಆದೇಶ ಹೊರಡಿಸಿದ್ದಾರೆ.

ಬಾದಾಮಿ ಶಾಸಕ ಭೀಮಸೇನ ಚಿಮ್ಮನಕಟ್ಟಿ ಸೇರಿದಂತೆ ಬಾಗಲಕೋಟೆ, ರಾಮದುರ್ಗ, ನವಲಗುಂದ ಶಾಸಕರ ಹಾಗೂ ಜಿಲ್ಲಾಧಿಕಾರಿಗಳ ಮನವಿಯ ಮೇರೆಗೆ ಎಪ್ರೀಲ್ 5 ರಿಂದ 17 ರವರೆಗೆ ಪ್ರತಿದಿನ ಒಂದು ಸಾವಿರ ಕ್ಯೂಸೆಕ್ಸ ನಂತೆ ಒಟ್ಟು 1 ಟಿಎಂಸಿ ನೀರನ್ನು ಬಿಡುಗಡೆ ಮಾಡಲಾಗುತ್ತಿದೆ. ಬಿಡುಗಡೆ ಮಾಡಿದ ನೀರನ್ನು ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ಉದ್ದೇಶಕ್ಕಾಗಿ ಮಾತ್ರ ಬಳಸತಕ್ಕದೆಂದು, ಈ ಕುರಿತು ಅಧಿಕಾರಿಗಳ ತಂಡ ಮೇಲ್ವಿಚಾರಣೆ ಮಾಡಿ ಪ್ರತಿ ದಿನ ದೈನಂದಿನ ವರದಿ ಸಲ್ಲಿಸಬೇಕು. ಕೃಷಿಗೆ ಬಳಸಬಾರದು ಎಂದು ಬೆಳಗಾವಿ ಪ್ರಾದೇಶಕ ಆಯುಕ್ತ ಎಸ್.ಬಿ.ಶೆಟ್ಟೆನ್ನವರ ಆದೇಶದಲ್ಲಿ ತಿಳಿಸಿದ್ದಾರೆ.

# ನೆರಳಿಗಂಟಿದ ನೆನಪು ಶಿವುಕುಮಾರ ಕರನಂದಿ ಅವರ ಕಾವ್ಯಕ್ಕೆ ದತ್ತಿ ಪ್ರಶಸ್ತಿ ಪ್ರದಾನ



**ಉದಯಕಾಲ್ ನ್ಯೂಸ್**

**ಗುಳೇದಗುಡ್ಡ:** ಪಟ್ಟಣದ ಯುವ ಕವಿ ಶಿವುಕುಮಾರ ಕರನಂದಿ ಅವರಿಗೆ ಲೋಕಾಪುರದಲ್ಲಿ ಜರುಗಿದ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಬಾಗಲಕೋಟೆ, ತಾಲೂಕ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಹೋಬಳಿ ಘಟಕ ಲೋಕಾಪುರ ಇವರುಗಳ ಸಂಯುಕ್ತ ಆಶ್ರಯದಲ್ಲಿ ಇದೆ ರವಿವಾರ ದಿ, 31,ರಂದು, ವಿದ್ಯಾಚೇತನ ಪ್ರಾಥಮಿಕ ಶಾಲೆ ಕಾಡರಕೊಪ್ಪ ರಸ್ತೆ ಲೋಕಾಪೂರ ದಲ್ಲಿ ನಡೆದ ಕಾರ್ಯಕ್ರಮ.

ಬಾಗಲಕೋಟೆ ಜಿಲ್ಲಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಬೀಳಗಿ ದತ್ತಿ ಪ್ರಶಸ್ತಿ ಶಿವಕುಮಾರ ಕರನಂದಿ ಅವರ ನೆರಳಿಗಂಟಿದ ನೆನಪು ಕೃತಿಗಾಗಿ,

ಜಾನಪದ ವಿದ್ವಾಂಸರಾದ ಡಾ ಚಕ್ಕೇರಿ ಶಿವಶಂಕರ ರವರು ಪ್ರಶಸ್ತಿ ಪ್ರದಾನ ಮಾಡಿದರು. ರಾಮನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ ಟಿ ನಾಗೇಶ, ಜಿಲ್ಲಾಧ್ಯಕ್ಷ ಶಿವಾನಂದ ಶೆಲ್ಲಿಕೇರಿ, ತಾಲೂಕ ಅಧ್ಯಕ್ಷ ಆನಂದ ಪೂಜಾರಿ ಹಾಗೂ ಇತರರು ಇದ್ದರು.

# ಮತದಾನ ಮಹತ್ವ ಸಾರಲು ಬೃಹತ್ ಮಾನವ ಸರಪಳಿ ನಿರ್ಮಾಣ

**ಉದಯಕಾಲ್ ನ್ಯೂಸ್**

**ಬಾಗಲಕೋಟೆ:** ಮತದಾನ ಮಹತ್ವ ಸಾರಲು ನವನಗರದ ಕಾಳಿದಾಸ ಸರ್ಕಲ್‌ನಲ್ಲಿ ಹಮ್ಮಿಕೊಂಡ ಪಂಜಿನ ಜಾಥಾಕ್ಕೆ ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಚಾಲನೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಮತದಾನ ಜಾಗೃತಿಗಾಗಿ ಹಮ್ಮಿಕೊಂಡ ಪಂಜಿನ ಜಾಥಾ ಕಾಳಿದಾಸ ಸರ್ಕಲ್‌ನಿಂದ ಪ್ರಾರಂಭಗೊಂಡು ವಿದ್ಯಾಗಿರಿ ವೃತ್ತಕ್ಕೆ ಮುಕ್ತಾಯಗೊಂಡಿತು. ಪಂಜಿನ ಜಾಥಾ ಕಾರ್ಯಕ್ರಮ ಎಲ್ಲರ ಗಮನ ಸೆಳೆಯುವಂತೆ ಮಾಡಿತು. ಜಾಥಾದುದ್ದಕ್ಕೂ ಮತದಾನ ಜಾಗೃತಿಯ ಘೋಷಣೆಗಳನ್ನು ಕೂಗಲಾಯಿತು.

ವಿದ್ಯಾಗಿರಿ ವೃತ್ತದಲ್ಲಿ ಬೃಹತ್ ಮಾನವ ಸರಪಳಿ ನಿರ್ಮಿಸುವ ಮೂಲಕ ನೆರೆದ ಜನರ ಗಮನ



ಸೆಳೆಯುವಂತೆ ಮಾಡಿತು. ಪಂಜಿನ ಬೆಳಕಿನಲ್ಲಿ ವೃತ್ತವೆಲ್ಲ ಬಣ್ಣದ ಹಬ್ಬದ ವಾತಾವರಣ ಸೃಷ್ಟಿಸಿತು. ಇದರ ಜೊತೆಗೆ ಸ್ವಚ್ಚ ವಾಹಿನಿಯಲ್ಲಿ ಮತವ ಹಾಕುವಿರಾ ಇಲ್ಲ ಮತವ ಮಾಡುವಿರಾ ಮತವಕ್ಕೆ ಬೆಲೆಯ ಕಟ್ಟುವಿರಾ ಸೇರಿದಂತೆ ವಿವಿಧ ಮತದಾನ ಜಾಗೃತಿಯ ಹಾಡುಗಳನ್ನು ಸಹ ಹಕಲಾಗಿತ್ತು.

ಜಿ.ಪಂ ಸಿಇಒ ಆಗಿರುವ ಜಿಲ್ಲಾ ಸ್ವೀಪ್ ನೋಡಲ್ ಅಧಿಕಾರಿ ಶಶಿಧರ ಕುರೇರ ಮತದಾನ ಜಾಗೃತಿ ಕುರಿತು ಪ್ರತಿಜ್ಞಾವಿಧಿಯನ್ನು ಬೋಧಿಸಿದರು. ಪ್ರಜಾಪ್ರಭುತ್ವದ ಘನತೆಯನ್ನು ಎತ್ತಿ ಹಿಡಿಯುವವದರ ಜೊತೆಗೆ ಪ್ರತಿಯೊಂದು ಚುನಾವಣೆಯಲ್ಲಿ ತಪ್ಪದೇ ಮತದಾನ ಮಾಡುವುದಾಗಿ ಬೋಧಿಸಲಾಯಿತು.

ಜಾಥಾದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ, ನಗರಸಭೆ ಪೌರಾಯುಕ್ತ ವಾಸಣ್ಣ ಆರ್ ಸೇರಿದಂತೆ ಪೌರ ಕಾರ್ಮಿಕರು, ನಗರಸಭೆ ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು.

# ಮಕ್ಕಳಿಗೆ ನಮ್ಮ ಸಂಸ್ಕಾರ ಕಲಿಸಿ: ಕಾಶೀನಾಥ ಶ್ರೀಗಳು



**ಉದಯಕಾಲ್ ನ್ಯೂಸ್**

**ಗುಳೇದಗುಡ್ಡ:** ಸಮಾಜದಲ್ಲಿ ಧರ್ಮದ ಆಚರಣೆಗೆ ಬರಗಾಲ ಬರಬಾರದು. ಧರ್ಮದ ಆಚರಣೆ ಪ್ರತಿಯೊಬ್ಬರೂ ಮಾಡಬೇಕು. ಧರ್ಮ ರಕ್ಷಣೆ, ಲಿಂಗಾರ್ಚನೆ, ವೃತಾಚರಣೆ ನಮ್ಮ ಕರ್ತವ್ಯವಾಗಬೇಕು. ಧರ್ಮದ ಹಾದಿಯಲ್ಲಿ ನಡೆಯಬೇಕು. ಮಕ್ಕಳಿಗೆ ಉತ್ತಮ ಸಂಸ್ಕಾರ, ಲಿಂಗಪೂಜೆ, ರುದ್ರಾಕ್ಷಿ ಧಾರಣೆ, ಪೂಜೆ, ವಿಭೂತಿ ಮುಂತಾದ ಮೊದಲ ಪಾಠ ಕಲಿಸಬೇಕು. ಲಿಂಗ ಚೈತನ್ಯದ ಸ್ವರೂಪವಾಗಿದೆ. ಲಿಂಗಪೂಜೆಗೆ ವಿಶೇಷ ಶಕ್ತಿ ಇದೆ. ಸಮಾಜದಲ್ಲಿ ಜಂಗಮರನ್ನು ಭಗವಂತನ ಸ್ವರೂಪದಲ್ಲಿ ಕಾಣುತ್ತಾರೆ. ಆದರೆ ಇವತ್ತು ಜಂಗಮರು ಕೂಡಾ ಲಿಂಗಧಾರಣೆಯಿಂದ ದೂರ ಸರಿಯುತ್ತಿದ್ದಾರೆ ಎಂದು ಮುರುಘಾಮಠದ ಶ್ರೀ ಕಾಶೀನಾಥ ಮಹಾಸ್ವಾಮಿಗಳು ಹೇಳಿದರು.

ಅವರು ರವಿವಾರ ಪಟ್ಟಣದ ಮುರುಘಾಮಠದಲ್ಲಿ ವೀರಶೈವ ಜಂಗಮ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ನಡೆದ ಶ್ರೀ ರೇಣುಕಾಚಾರ್ಯರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಬಸವಾದಿ ಶರಣರು ಹಾಕಿಕೊಟ್ಟ ವಚನ, ತತ್ವ ಸಿದ್ದಾಂತಗಳನ್ನು ಜೀವನದಲ್ಲಿ ಜಂಗಮ ಸಮಾಜದವರು ಸಮಾಜಕ್ಕೆ ಮಾರ್ಗದರ್ಶನ ಮಾಡುತ್ತಾರೆ. ಶ್ರೀ ರೇಣುಕಾಚಾರ್ಯರು ಈ ಸಮಾಜಕ್ಕೆ ನೀಡಿದ ಕೊಡುಗೆ ಅಪಾರವಾಗಿದೆ ಎಂದು ಹೇಳಿದರು.

ಮರಡಿಮಠದ ಅಭಿನವ ಕಾಡಸಿದ್ದೇಶ್ವರ ಶ್ರೀಗಳು ಮಾತನಾಡಿ, ಬದುಕಿನಲ್ಲಿ ವೀರೇಶ್ವರ ಧರ್ಮ ಪರಂಪರೆಯನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ವೀರಶೈವ ಧರ್ಮದ ಮುಖ್ಯ ಆಚರಣೆ ಲಿಂಗಪೂಜೆ. ಲಿಂಗ ಪೂಜೆ, ರುದ್ರಾಕ್ಷಿ ಧಾರಣ ಮಕ್ಕಳಲ್ಲಿ ಬೆಳೆಸಬೇಕು. ಮನಸ್ಸು ಕೊಟ್ಟು ಲಿಂಗ ಪೂಜೆ ಮಾಡಿಕೊಳ್ಳುವ ರೂಢಿ ಬೆಳೆಸಿಕೊಳ್ಳಬೇಕು. ಲಿಂಗಪೂಜೆ ಒಂದು ಯೋಗ. ಅದೊಂದು ಸಾಧನೆ. ಸಿದ್ಧಾಂತ ಶಿಖಾಮಣಿಯನ್ನು ಆದರ್ಶವಾಗಿಸಿಕೊಂಡವರು ಪ್ರತಿದಿನ ಶಿವಯೋಗದಲ್ಲಿ ತೊಡಗಬೇಕು ಎಂದರು. ಕಾರ್ಯಕ್ರಮದಲ್ಲಿ ಚರಮೂರ್ತಿ ಶ್ರೀಗಳು, ಹಳಿಂಗಳದ ಶ್ರೀ ಶಿವಾನಂದ ದೇವರು ಸಾನಿಧ್ಯ ವಹಿಸಿದ್ದರು.

ಜಂಗಮ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಶಿವಾನಂದ ಮಳ್ಳಿಮಠ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಸುಮಾ ಮಠ ಅವರಿಂದ ಸಂಗೀತ ಸೇವೆ ನಡೆಯಿತು. ಕಾರ್ಯಕ್ರಮದಲ್ಲಿ ಮುಪ್ಪಯ್ಯ ಘಂಟಿಮಠ, ಪ್ರಭು ತಟ್ಟಿಮಠ, ಪಡದಯ್ಯ ಕಕ್ಕಯ್ಯನಮಠ, ವಿಶ್ವನಾಥ ಹಿರೇಮಠ, ಜಗದೀಶ ಸರಗಣಾಚಾರಿ, ಈರಯ್ಯ ಚನಸಂಗಯ್ಯನಮಠ, ದ್ರಾಕ್ಷಾಯಣಿ ಹಿರೇಮಠ, ಸಂಗಯ್ಯ ಹಿರೇಮಠ, ಉಮೇಶ ಶಿವನಗೌಡರ, ಸಂಗಯ್ಯ ಶಿವಪ್ಪಯ್ಯನಮಠ, ಬಸವರಾಜ ಸಿಂದಗಿಮಠ, ಎನ್.ಜಿ.ಹಿರೇಮಠ ಕುಮಾರ ಸಾವಳಗಿಮಠ, ರಾಜು ಹಿರೇಮಠ, ಸಾವಳಗಯ್ಯ ಸಂಕೀನಮಠ, ಸಿದ್ದಯ್ಯ ಸಂಕೀನಮಠ, ರಾಜು ಸ್ಥಾವರಮಠ, ಗಿರಿಜಾ ಕಿರಸೂರಮಠ, ನೀಲವ್ವ ಚನ್ನಸಂಗನಮಠ, ಅಕ್ಕಮ್ಮ ಶಿವಪ್ಪಯ್ಯನಮಠ ಸೇರಿದಂತೆ ಸಮಾಜ ಬಾಂಧವರು ಇದ್ದರು.

# ರೇಲ್ವೆ ಸ್ಟೇಷನ್ ಚೆಕ್‌ಪೋಸ್ಟಗೆ ಡಿಸಿ ಭೇಟಿ ಪರಿಶೀಲನೆ



**ಉದಯಕಾಲ ನ್ಯೂಸ್**

**ಬಾಗಲಕೋಟೆ:** ಲೋಕಸಭಾ ಚುನಾವಣೆ-2024ರ ನೀತಿ ಸಂಹಿತೆ ಹಿನ್ನಲೆಯಲ್ಲಿ ನಗರದ ರೇಲ್ವೆ ನಿಲ್ದಾಣಕ್ಕೆ ಜಿಲ್ಲಾಧಿಕಾರಿ ಆಗಿರುವ ಜಿಲ್ಲಾ ಚುನಾವಣಾಧಿಕಾರಿ ಜಾನಕಿ ಕೆ.ಎಂ ಭೇಟಿ ನೀಡಿ ಪೊಲೀಸ್ ಚೆಕ್‌ಪೋಸ್ಟಗೆ ತೆರಳಿ ಪರಿಶೀಲನೆ ನಡೆಸಿದರು.

ಶನಿವಾರ ಸಂಜೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ, ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಅವರೊಂದಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಕಾಟಾಚಾರಕ್ಕೆ ಮುಖ್ಯ ದ್ವಾರದಲ್ಲಿ ಚೆಕ್‌ಪೋಸ್ಟ ಸ್ಥಾಪಿಸಿರುವ ಬಗ್ಗೆ ಬ್ಯಾನರ್ ಹಾಕಲಾಗಿತ್ತು. ಅಲ್ಲದೇ ಸಿಬ್ಬಂದಿ ಕೂಡಾ ಒಬ್ಬರೇ ಇರುವದನ್ನು ಕಂಡು ಸರತಿ ಪಾಳೆಯಲ್ಲಿ ಸಿಬ್ಬಂದಿ ನೇಮಿಸಲು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಪ್ರತಿದಿನ ರೈಲು ಬಂದಾಗ ಅನುಮಾನಾಸ್ಪದ ಕಂಡುಬಂದ ಲಗೇಜ್ ಗಳನ್ನು ಪರಿಶೀಲನೆ ಮಾಡಬೇಕು. ಈ ಬಗ್ಗೆ ಪ್ರತಿದಿನ ಚುನಾವಣಾ ವಿಭಾಗಕ್ಕೆ ವರದಿ ಸಲ್ಲಿಸಲು ಸೂಚಿಸರಲ್ಲದೇ ಚೆಕ್‌ಪೋಸ್ಟನಲ್ಲಿ ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸದೇ ಇದ್ದಲ್ಲಿ ಕ್ರಮಕ್ಕೈಗೊಳ್ಳಲಾಗುವುದು. ಚುನಾವಣೆ ಹಿನ್ನಲೆಯಲ್ಲಿ ಫ್ಲಾಯಿಂಗ್ ಸ್ಕ್ವಾಡ್ ತಂಡ ಭೇಟಿ ನೀಡಲಿದ್ದು, ಸರಿಯಾಗಿ ಕಾರ್ಯನಿರ್ವಹಿಸಲು ಸೂಚಿಸಿದರು.

# ಶಿಕ್ಷಕ ಪ್ರಸ್ತುತ ಸನ್ನವೇಶದ ಕಲ್ಪವೃಕ್ಷ, ಕಾಮಧೇನು: ನಾರನಗೌಡ ಉತ್ತಂಗಿ




**ಉದಯಕಾಲ್ ನ್ಯೂಸ್**

**ಮಹಾಲಿಂಗಪುರ:** ಜಗತ್ತಿನ ಸರ್ವ ಸಮಸ್ಯೆಗಳಿಗೂ ಪರಿಹಾರವೆಂದರೆ ಶಿಕ್ಷಣ ಎಂಬ ಡಾ.ರಾಧಾಕೃಷ್ಣನ್ ವಾಣಿಯಂತೆ ಶಿಕ್ಷಣವನ್ನು ಧಾರೆ ಎರೆಯುವ ಶಿಕ್ಷಕ ಪ್ರಸ್ತುತ ಸನ್ನವೇಶದ ಕಲ್ಪವೃಕ್ಷ, ಕಾಮಧೇನು ಎಂದು ಶಿಕ್ಷಕ ನಾರನಗೌಡ ಉತ್ತಂಗಿ ಹೇಳಿದರು.

ಸಮೀಪದ ಯಲ್ಲಟ್ಟಿಯ ಶ್ರೀ ನಿರೂಪಾಧೀಶ್ವರ ಮಠದ ಆವರಣದಲ್ಲಿ ಬನಹಟ್ಟಿಯ ಜನತಾ ಶಿಕ್ಷಣ ಸಂಸ್ಥೆಯ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ವತಿಯಿಂದ ಬಿ.ಇಡಿ ಪ್ರಶಿಕ್ಷಣಾರ್ಥಿಗಳಿಗಾಗಿ ಶುಕ್ರವಾರದಿಂದ ಜರುಗುತ್ತಿರುವ ಪೌರತ್ವ ತರಬೇತಿ ಶಿಬಿರದ 2ನೇ ದಿನ ಶನಿವಾರದ ಉಪನ್ಯಾಸ ನೀಡಿ ಮಾತನಾಡಿದರು. ಸ್ವಾಮಿ ವಿವೇಕಾನಂದರ ಆಶಯದಂತೆ ಶಿಕ್ಷಣ ಧೈರ್ಯವಂತ ಪರಾಕ್ರಮಿಗಳನ್ನು ಸೃಷ್ಟಿಸಬೇಕು ಹಾಗಾಗದಿದ್ದರೆ ಶಿಕ್ಷಣ ಕೇವಲ ಅಕ್ಷರ ಜ್ಞಾನವಾಗಿ ವ್ಯರ್ಥವಾಗುತ್ತದೆ. ಈ ಜಗತ್ತಿಗೆ ಜ್ಞಾನದ ಬೆಳಕನ್ನು ನೀಡುವ ಶಿಕ್ಷಕ ಸರ್ವಶ್ರೇಷ್ಠ. ಭಾವಿ ಶಿಕ್ಷಕರಾದ ಪ್ರಶಿಕ್ಷಣಾರ್ಥಿಗಳ ಹೃದಯದಲ್ಲಿ ಇಂತಹ ಹೆಮ್ಮೆ ಮತ್ತು ಅಭಿಮಾನ ಸದಾ ಇರಲಿ ಆಗ ಮಾತ್ರ ನಿಮ್ಮಿಂದ ದೇಶಕ್ಕೆ ಕೊಡುಗೆಯಾಗಲು ಸಾಧ್ಯ ಎಂದರು.

ಕಾಲೇಜು ಪ್ರಾಂಶುಪಾಲೆ ಡಾ. ಮಧುಮಾಲತಿ ಬೂದಿ ಅಧ್ಯಕ್ಷತೆ ವಹಿ ಮಾತನಾಡಿ, ಕಲಿತ ಜ್ಞಾನವನ್ನು ಜೀವನಕ್ಕೆ ಸಮೀಕರಿಸಿಕೊಂಡಾಗ ಅದು ಶಾಶ್ವತವಾಗುತ್ತದೆ. ಪ್ರಶಿಕ್ಷಣಾರ್ಥಿಗಳು ಗ್ರಾಮೀಣ ಜೀವನ ಅರ್ಥೈಸುವ, ಶ್ರಮವನ್ನು ಗೌರವಿಸುವ, ಸಾಂಘಿಕ ಮನೋಭಾವ, ನಾಯಕತ್ವ ಮುಂತಾದ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕೆಂಬುದು ಶಿಬಿರದ ಉದ್ದೇಶವಾಗಿದೆ ಎಂದರು.

ಸುನಂದಾ ತೇಲಿ ಪ್ರಾರ್ಥಿಸಿ, ಶೋಭಾ ಕಿತ್ತೂರ ಮತ್ತು ಗಾಯತ್ರಿ ಗುರವ ಸ್ವಾಗತಿಸಿ, ಅರ್ಚನಾ ಬಟ್ಲದ ಪರಿಚಯಿಸಿ, ಈರಣ್ಣ ಹಳದೂರ ವಂದಿಸಿದರು. ಉಪನ್ಯಾಸಕರಾದ ಪ್ರೊ.ಎಸ್ .ಐ.ಮೇಲಗಿರಿ ಹಾಗೂ ಸಿಬ್ಬಂದಿ ಶ್ರೀದೇವಿ ನೇಸೂರ, ಜಯಶ್ರೀ ಕೊಲ್ಲಾಪುರ, ಈರಣ್ಣ ಬಿಳ್ಳೂರ ಇತರರಿದ್ದರು.

# 8ನೇ ತರಗತಿ ಉತ್ತರ ಪತ್ರಿಕೆ ಮೌಲ್ಯಮಾಪನ



**ಉದಯಕಾಲ ನ್ಯೂಸ್**

**ಬಾದಾಮಿ:** ನಗರದ ಶ್ರೀ ವೀರಶೈವ ಶಾಲೆಯ ಶ್ರೀ ಬಸವೇಶ್ವರ ಪ್ರೌಢ ಶಾಲೆಯಲ್ಲಿ ಎಂಟನೇ ತರಗತಿಯ ಮೌಲ್ಯಾಂಕಣ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯ ಭರದಿಂದ ನಡೆಯಿತು. ತಾಲೂಕಿನ ಸುಮಾರು 150 ಕ್ಕೂ ಹೆಚ್ಚು ಮೌಲ್ಯಮಾಪಕರು ಭಾಗವಹಿಸಿ ಮೌಲ್ಯಮಾಪನ ಕಾರ್ಯದಲ್ಲಿ ಭಾಗಿಯಾದರು. ಮೌಲ್ಯಮಾಪನ ಕೇಂದ್ರಕ್ಕೆ ಬಿಇಒ ಎನ್.ವೈ. ಕುಂದರಗಿ, ಕ್ಷೇತ್ರ ಸಮನ್ವಯಾಧಿಕಾರಿ ಎಂ. ಬಿ.ದೊಡ್ಡಪ್ಪನ್ನವರ, ದೈಹಿಕ ಶಿಕ್ಷಣ ಪರಿವೀಕ್ಷಕ ಬಿ.ಎಚ್.ಹಳಗೇರಿ, ಶಿಕ್ಷಣ ಸಂಯೋಜಕರಾದ ವೈ.ಬಿ.ಚಲವಾದಿ, ಎಂ.ಸಿ.ನಾಲತವಾಡ, ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಎಂ.ಎ.ಹದ್ಲಿ ಭೇಟಿ ನೀಡಿ ಮೌಲ್ಯಮಾಪನ ಕಾರ್ಯವನ್ನು ಪರಿಶೀಲಿಸಿ ಪ್ರಶಂಸೆ ವ್ಯಕ್ತಪಡಿಸಿದರು. 8 ನೇ ತರಗತಿ ಮೌಲ್ಯಮಾಪನದ ನೋಡಲ್ ಅಧಿಕಾರಿ, ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಎಸ್.ಎಸ್.ಯಲಿಗಾರ ಇವರು ಉಸ್ತುವಾರಿ ವಹಿಸಿದ್ದರು. ಈ ಸಂದರ್ಭದಲ್ಲಿ ಎಲ್ಲ ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು, ಸಮೂಹ ಸಂಪನ್ಮೂಲ ವ್ಯಕ್ತಿಗಳು ಹಾಜರಿದ್ದರು.

# ಇಂದಿನಿಂದ ರಾಮಜನ್ಮಭೂಮಿ ಅಯೋಧ್ಯೆಗೆ ಪಾದಯಾತ್ರೆ



**ಉದಯಕಾಲ್ ನ್ಯೂಸ್**

**ಇಳಕಲ್:** ಸಮೀಪದ ಬಂಡರಗಲ್ ಗ್ರಾಮದಿಂದ ಪ್ರಭು ಶ್ರೀ ರಾಮಚಂದ್ರ, ಜನ್ಮಭೂಮಿ ಅಯೋಧ್ಯೆಗೆ ಏಪ್ರಿಲ್ ಒಂದರಿಂದ ಜೂನ್ ಹತ್ತರವರೆಗೆ ಸುಮಾರು 2300 ಕಿಲೋಮೀಟರ್ ಪಾದಯಾತ್ರೆಯ ಮೂಲಕ ಪ್ರಭು ಶ್ರೀ ರಾಮಚಂದ್ರರ ದರ್ಶನ ಪಡೆಯುವೆ ಎಂದು ಪತ್ರಿಕಾಗೋಷ್ಠಿಯಲ್ಲಿ ಮುತ್ತು ಕರಮೂಡಿ ಹೇಳಿದರು.

ಪಾದಯಾತ್ರೆ ಮಾಡುವ ಯುವಕ ಮುತ್ತು ಕರಮುಡಿ ಮಾತನಾಡಿ ಪುಣ್ಯಕ್ಷೇತ್ರವಾದ ಪ್ರಭು ಶ್ರೀರಾಮಚಂದ್ರರ ಭವ್ಯ ರಾಮಮಂದಿರ ನಿರ್ಮಾಣಗೊಂಡಿದೆ, ಭವ್ಯ ರಾಮಮಂದಿರ ನಿರ್ಮಾಣವಾದ ಮೇಲೆ ನಾನು ಪಾದಯಾತ್ರೆ ಮಾಡುತ್ತೇನೆ ಎಂದು ಸಂಕಲ್ಪ ಹೊಂದಿದ್ದೆನು ಅದರಂತೆ ನಾನು ಇಂದಿನಿಂದ ಸುಮಾರು ಮೂರು ತಿಂಗಳವರೆಗೆ ನನ್ನ ಪಾದಯಾತ್ರೆ ನಡೆಯುತ್ತದೆ ಎಂದು ತಿಳಿಸಿದರು. ಈ ಪಾದಯಾತ್ರೆಯಲ್ಲಿ ನನ್ನ ಹುಟ್ಟೂರಾದ ಬಂಡರಗಲ್ ಗ್ರಾಮದ ಎಲ್ಲಾ ಗುರು ಹಿರಿಯರ ಸಹಕಾರದೊಂದಿಗೆ, ಹಾಗೂ ಇಳಕಲ್ ನಗರದ ಎಲ್ಲಾ

ಹಿಂದೂ ಸಮಾಜ ಬಾಂಧವರ ಸಹಕಾರದೊಂದಿಗೆ, ಗೆಳೆಯರ ಬಳಗದ ಸಹಕಾರದೊಂದಿಗೆ 30 ರಿಂದ 40 ಇಟ ಪಾದಯಾತ್ರೆ ಕೈಗೊಳ್ಳುವೆ ಎಂದರು. ಅದೇ ರೀತಿ ಈ ಪಾದಯಾತ್ರೆಯಲ್ಲಿ ಸಹಾಯಕ್ಕಾಗಿ ಪರೋಕ್ಷ ಅಪರೂಕ್ಷವಾಗಿ ತಮ್ಮ ಸಹಕಾರ ಇರಲಿ ಎಂದು ಕೋರಿದರು.

ಈ ಸಂದರ್ಭದಲ್ಲಿ ಬಾಲನಗೌಡ ಪೋಲಿಸಪಾಟೀಲ್, ಬಸವರಾಜ್ ಹಡಪದ, ಗೋಪಾಲ ಹಾಗೂ ಇತರರು ಉಪಸ್ಥಿತರಿದ್ದರು

# ಸೇವಾ ಮನೋಭಾವ ಸಂತೃಪ್ತಿ ಬದುಕಿಗೆ ದಾರಿದೀಪ : ಡಾ.ಅರುಣಕುಮಾರ ಗಾಳಿ



**ಉದಯಕಾಲ ನ್ಯೂಸ್**

**ಬಾಗಲಕೋಟೆ:** ಬಾಗಲಕೋಟೆ ಪಟ್ಟಣದ ಕೆ.ಬಿ.ಗೋಸಬಾಳ ಅವರು ಉನ್ನತ ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸುಮಾರು 36 ವರ್ಷಗಳ ಸುದೀರ್ಘ ಕಾಲ ಬೀಳಗಿ, ನವನಗರ ಬಾಗಲಕೋಟೆ ಮತ್ತು ರಾಂಪೂರ ಸ,ಪ್ರ.ದ ಕಾಲೇಜುಗಳಲ್ಲಿ ಅತ್ಯುತ್ತಮ ಸೇವೆಯನ್ನು ಸಲ್ಲಿಸಿ ಇಂದು ಅವರು ರಾಂಪೂರ ಸಪ್ರದ ಕಾಲೇಜಿನ ಮ್ಯಾನೇಜರ್ ವೃತ್ತಿಯ ಸೇವೆಯಿಂದ ನಿವೃತ್ತರಾಗಿದ್ದು ಅವರ ಸೇವೆ ಉನ್ನತ ಶಿಕ್ಷಣ ರಂಗದಲ್ಲಿ ಮಾದರಿಯಾಗಿದೆ ಎಂದು ನವನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯರಾದ ಡಾ.ಅರುಣಕುಮಾರ ಗಾಳಿ ಅವರು ಹೇಳಿದರು.ಅವರು ಬಾಗಲಕೋಟೆ ಪಟ್ಟಣದಲ್ಲಿ ನಡೆದ ಕೆ.ಬಿ.ಗೋಸಬಾಳ ಅವರ ನಿವೃತ್ತ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕೆ.ಬಿ.ಗೋಸಬಾಳ ದಂಪತಿಗಳಿಗೆ ಸನ್ಮಾನಿಸಿ ಮಾತನಾಡಿದರು, ಕೆ.ಬಿ.ಗೋಸಬಾಳ ಅವರ ಸರಳ ಸಜ್ಜನದ ವ್ಯಕ್ತಿತ್ವ ಹೊಂದಿದ್ದು ಅವರ ಪ್ರಾಮಾಣಿಕ ಸೇವೆ ಸದಾ ಸ್ಮರಣಿಯವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ನವನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಐಕ್ಯೂಎಸಿ ಸಂಚಾಲಕರಾದ ಪ್ರೊ. ಅಜಿತ್ ನಾಗರಾಳೆ, ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಜಿ.ಜಿ.ಹಿರೇಮಠ ಅವರು ಮಾತನಾಡಿ ಗೋಸಬಾಳ ಅವರ ವೃತ್ತಿ ಬದುಕು ಇತರರಿಗೂ ಸ್ಪೂರ್ತಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಬಂಧುಗಳು, ಹಿತೈಹಿಸಿಗಳು ಕೆ.ಬಿ.ಗೋಸಬಾಳ ದಂಪತಿಗಳವರಿಗೆ ಸಹೃದಯತೆಯಿಂದ ಸನ್ಮಾನಿಸಿ ಅವರ ನಿವೃತ್ತಿ ಜೀವನಕ್ಕೆ ಶುಭ ಹಾರೈಸಿದರು, ಈ ಸಂದರ್ಭದಲ್ಲಿ ಸ್ನೇಹಿತರು ಭಾಗವಹಿಸಿ ಗೋಸಬಾಳ ಅವರ ನಿವೃತ್ತ ಜೀವನ ಸಂತೋಷ ನೆಮ್ಮದಿಯಿಂದ ಕೂಡಿರಲಿ ಎಂದು ಶುಭ ಹಾರೈಸಿದರು. ಪ್ರೊ.ಸವಿತಾ ಪಟ್ಟಣಶೆಟ್ಟಿ, ಎಂ.ಎಸ್. ಇಂಜಗನೇರಿ, ತಾಯಕ್ಕ ಚಲವಾದಿ, ಗುಡ್ಡದ, ಜಯಶ್ರೀ ನೀಡಗುಂದಿ, ರೂಪಾ ಸೇರಿದಂತೆ ಮುಂತಾದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.


## ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್

ನೋಂದಾಯಿತ ಕಚೇರಿ: ಗ್ರೇಪ್ ಗಾರ್ಡನ್, ನಂ. 27, 3ನೇ ಎ ಕ್ರಾಸ್, 18ನೇ ಮೈನ್ ಕೋರಮಂಗಲ 6ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560095 ಕರ್ನಾಟಕ.
ಶಾಖಾ ಕಚೇರಿ: ವಾರ್ಡ್ ನಂ. 2, ಸಿಎಸ್‌ಟಿ ನಂ. 5212 ರಿಂದ 5217/9ಬಿ, ಜಮಖಂಡಿ-ಕುಡಚಿ ರಸ್ತೆ, ಜಮಖಂಡಿ, ಕರ್ನಾಟಕ-587301.

**ಇ-ಹರಾಜು ಸೂಚನೆ**

ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆ್ಯಕ್ಟ್, 2002ನ್ನು ಓದಿಕೊಂಡಂತೆ ನಿಯಮ 8(6) ಮತ್ತು 9(1) ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ಅನ್ವಯ ಇ-ಹರಾಜು ಮಾರಾಟ ಪ್ರಕಟಣೆ
ಕೆಳಸಹಿದಾರರು ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಅಧಿಕೃತ ಅಧಿಕಾರಿಯಾಗಿದ್ದು, ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಸೆಕ್ಷನ್ 13(4)ರ ಸರ್ಫೇಸಿ ಕಅಯಿದೆ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸ್ವಾಧೀನಪಡಿಸಿಕೊಂಡಿರುತ್ತಾರೆ. ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರ(ರು)ರಿಗೆ ತಿಳಿಸುವುದೇನೆಂದರೆ, ಈ ಕೆಳಗೆ ಪಟ್ಟಿ ಮಾಡಿರುವ ಸ್ಥಿರಾಸ್ತಿಗಳನ್ನು ಬ್ಯಾಂಕ್ ಗೆ ಬರಬೇಕಾಗಿರುವ ಬಾಕಿ ಹಣದ ವಸೂಲಾತಿಗಾಗಿ "ಎಲ್ಲಿ ಹೇಗಿದೆಯೋ ಹಾಗೆ", "ಏನಿದೆಯೋ ಹಾಗೆ" ಮತ್ತು "ಏನಿದೆಯೋ ಹಾಗೆ" ಆಧಾರದ ಮೇಲೆ ಈ ಕೆಳಗೆ ಹೆಸರಿಸಿರುವ ದಿನಾಂಕ ಮತ್ತು ಸಮಯದಂದು ಮಾರಾಟ ಮಾಡಲಿರುವರು.

| ಸಾಲದ ಖಾತಾ ಸಂ./ ಸಾಲಗಾರರ ಹೆಸರು | (1) 13-2 ನೋಟೀಸ್ ದಿನಾಂಕ & ತಗಾದೆ ಮೊತ್ತ (2) ಸ್ವಾಧೀನತೆ ದಿನಾಂಕ | 17.03.2024ರವರೆಗೆ ಪ್ರಸಕ್ತ ಬಾಕಿ | ಮೀಸಲು ಬೆಲೆ | ಅರ್ನೆಸ್ಟ್ ಠೇವಣಿ ಹಣ (ಇಎಂಡಿ) |
|---|---|---|---|---|
| 1174210080000005<br>1. ಶ್ರೀ ಶಿವಾನಂದ ಶಿವಪ್ಪಯ್ಯನಮಠ<br>2. ಶ್ರೀಮತಿ ಧನೇಶ್ವರಿ ಶಿವಪ್ಪಯ್ಯನಮಠ | (1) 02.06.2021 ಮತ್ತು ರೂ.11,41,899/- (ಹನ್ನೊಂದು ಲಕ್ಷ ನಲವತ್ತೊಂದು ಸಾವಿರದ ಎಂಟುನೂರ ತೊಂಭತ್ತೊಂಬತ್ತು ರೂಪಾಯಿ ಮಾತ್ರ) 30.05.2021ರಂತೆ<br>(2) ಸಾಂಕೇತಿಕ ಸ್ವಾಧೀನತೆ 06.12.2022<br>ಭೌತಿಕ ಸ್ವಾಧೀನತೆ : 27.12.2023 | ರೂ.20,74,357/- (ಇಪ್ಪತ್ತು ಲಕ್ಷ ಎಪ್ಪತ್ತನಾಲ್ಕು ಸಾವಿರದ ಮುನ್ನೂರ ಐವತ್ತೇಳು ರೂಪಾಯಿ ಮಾತ್ರ) | ರೂ.18,00,000/- (ಹದಿನೆಂಟು ಲಕ್ಷ ರೂಪಾಯಿ ಮಾತ್ರ) | ರೂ.1,80,000/- (ಒಂದು ಲಕ್ಷ ಎಂಭತ್ತು ಸಾವಿರ ರೂಪಾಯಿ ಮಾತ್ರ) |

ಆಸ್ತಿಯ ಷೆಡ್ಯೂಲ್ : ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಆಸ್ತಿಯ ಸಿಟಿಎಸ್ ನಂ. 3330/ಎ2, ವಿಸ್ತೀರ್ಣ 54.34 ಚ.ಮೀಟರ್ ಮಂಜಿ ಗಲ್ಲಿ, ಜಮಖಂಡಿ, ಜಮಖಂಡಿ ಸಿಎಂಸಿ ವ್ಯಾಪ್ತಿಯಲ್ಲಿದ್ದು, ಜಮಖಂಡಿ ಉಪನೋಂದಣಾಧಿಕಾರಿಗಳ ವ್ಯಾಪ್ತಿಗೆ ಒಳಪಟ್ಟಿದ್ದು, ಚಕ್ಕುಬಂದಿ: ಆಸ್ತಿ ಸಿಟಿಎಸ್ ನಂ. 3330/ಎ2, ಪೂರ್ವಕ್ಕೆ: ಸಿಟಿಎಸ್ ನಂ. 3331, 3330/ಬಿ/2, 3330/ಬಿ/1, ಪಶ್ಚಿಮಕ್ಕೆ: ಸುರೇಶ್ ನಿಂಗಯ್ಯ ಶಿವಪ್ಪಯ್ಯನಮಠ ಇವರ ಆಸ್ತಿ, ಉತ್ತರಕ್ಕೆ: ಸಿಟಿಎಸ್ ನಂ. 3322 ಮತ್ತು 3332, ದಕ್ಷಿಣಕ್ಕೆ: ರಸ್ತೆ.

**ಇ-ಹರಾಜಿನ ದಿನಾಂಕ ಮತ್ತು ಸಮಯ: 10.05.2024 ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.00 ಗಂಟೆ**

ಬಿಡ್ ಸಲ್ಲಿಸಲು ಕೊನೆಯ ದಿನಾಂಕ 09.05.2024ರಂದು ಬೆಳಿಗ್ಗೆ 10.00 ರಿಂದ ಸಂಜೆ 5.00 ರ ನಡುವೆ
ಆಸ್ತಿಗಳ ಪರಿವೀಕ್ಷಣೆ ದಿನಾಂಕ ಮತ್ತು ಸಮಯ 08.05.2024ರಂದು ಬೆಳಿಗ್ಗೆ 10.00 ರಿಂದ ಸಂಜೆ 5.00 ರ ನಡುವೆ

ಹೆಚ್ಚಿನ ಮಾಹಿತಿಗಾಗಿ ಬ್ಯಾಂಕ್‌ನ ಅಧಿಕೃತ ಅಧಿಕಾರಿಯವರನ್ನು ಸಂಪರ್ಕಿಸಿ: ಶ್ರೀ ಅರುಣ್ ಕುಮಾರ್ - 91481 98820/ ಶ್ರೀ ಕೃಷ್ಣಕುಮಾರ್- 96867 97339 / ಶ್ರೀ ಆರ್ ಪುಷ್ಪಕಾಂತ್ - 98431 14222

ಹರಾಜನ್ನು "ಎಲ್ಲಿ ಹೇಗಿದೆಯೋ ಹಾಗೆ" ಮತ್ತು "ಏನಿದೆಯೋ ಹಾಗೆ" ನಡೆಸಲಾಗುವುದು
ಹರಾಜನ್ನು ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ಅನುಮೋದಿತ ಇ-ಹರಾಜು ಸೇವಾ ಪೂರೈಕೆದಾರ - ಮೆ॥ ಸಿ1 ಇಂಡಿಯ ಪ್ರೈ. ಲಿ., ಮೂಲಕ ನಡೆಸಲಾಗುವುದು. ಸಂಪರ್ಕ ವ್ಯಕ್ತಿ: ಶ್ರೀ ಪ್ರಭಾಕರನ್ (ಮೊ. ಸಂ. 7418281709). ಅಪೇಕ್ಷಿತ ಬಿಡ್ಡುದಾರರು https://www.bankeauctions.com ಅಥವಾ https://www.ujjivanfb.in/e-auctions ಗೆ ಭೇಟಿ ನೀಡಿ ಆಸ್ತಿಗಳ ಹೆಚ್ಚಿನ ವಿವರಗಳನ್ನು ತಿಳಿದುಕೊಂಡು, ಬಿಡ್‌ನಲ್ಲಿ ಭಾಗವಹಿಸಬಹುದು ಹಾಗೂ ಅವರು ತಮ್ಮ ಹೆಸರನ್ನು https://www.bankeauctions.com ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡು ಉಚಿತವಾಗಿ ತಮ್ಮ ಯೂಸರ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಪಡೆದುಕೊಳ್ಳಬಹುದು. ಅಪೇಕ್ಷಿತ ಬಿಡ್ಡುದಾರರು ಇ ಹರಾಜು ಬಗ್ಗೆ ಆನ್‌ಲೈನ್ ತರಬೇತಿಯನ್ನು ಸೇವಾ ಪೂರೈಕೆದಾರರಾದ ಮೆ॥ ಸಿ1 ಇಂಡಿಯ ಪ್ರೈ.ಲಿ., ಸಹಾಯವಾಣಿ ಸಂ.7291918824, 25, 26, ಸಪೋರ್ಟ್ ಇ-ಮೇಲ್ ಐಡಿ : support@bankeauctions.com ಹರಾಜು ಪೋರ್ಟಲ್ : https://www.bankeauctions.com.
ಮಾರಾಟದ ವಿವರವಾದ ನಿಯಮ ಮತ್ತು ನಿಬಂಧನೆಗಳಿಗೆ ಬ್ಯಾಂಕ್ / ಪೂರಕ ಭದ್ರತಾದಾರರ ವೆಬ್‌ಸೈಟ್‌ನಲ್ಲಿ ನೀಡಲಾದ ಲಿಂಕ್‌ನ್ನು ಆಧಾರ ಮಾಡಿಕೊಳ್ಳಿ

https://www.ujjivansfb.in/e-auctions / https://www.bankeauctions.com.

ಸಹಿ/-
ದಿನಾಂಕ: 01.04.2024
ಸ್ಥಳ: ಬೆಂಗಳೂರು
ಅಧಿಕೃತ ಅಧಿಕಾರಿ
ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್